SRI DEVARAJ URS ACADEMY OF HIGHER EDUCATION & RESEARCH

SRI DEVARAJ URS MEDICAL COLLEGE

Tamaka, Kolar

UNIVERSITY LIBRARY & LEARNING RESOURCE CENTRE

ಉದಯವಾಣಿ

Online Newspaper Clipping Service

Dtd-Saturday, 13th, June- 2020

Page No.07

# ಮಣಿಪಾಲ ಶಿಕ್ಷಣ ಸಂಸ್ಥೆಗಳ ಮಹತ್ವದ ಸಾಧನೆ

## ಕೇಂದ್ರದ ರಾಷ್ಟ್ರೀಯ ಸಾಂಸ್ಥಿಕ ರ‍್ಯಾಂಕಿಂಗ್‌ನ ಬಹುತೇಕ ವಿಭಾಗಗಳಲ್ಲಿ ಸ್ಥಾನ

ನವದೆಹಲಿ: ಕೇಂದ್ರ ಮಾನವ ಸಂಪನ್ಮೂಲ ಅಭಿವೃದ್ಧಿ ಸಚಿವಾಲಯ ರಾಷ್ಟ್ರೀಯ ಸಾಂಸ್ಥಿಕ ರ‍್ಯಾಂಕಿಂಗ್ ಫ್ರೇಮ್‌ವರ್ಕ್ (ಎನ್‌ಐಆರ್‌ಎಫ್)ನ ಶ್ರೇಯಾಂಕ ಪಟ್ಟಿಯಲ್ಲಿ ಮಣಿಪಾಲ ಶಿಕ್ಷಣ ಸಂಸ್ಥೆಗಳು ಬಹುತೇಕ ಪಟ್ಟಿಯಲ್ಲಿ ಸ್ಥಾನ ಪಡೆದ ಹೆಗ್ಗಳಿಕೆಗೆ ಪಾತ್ರವಾಗಿವೆ.

ದಂತವೈದ್ಯ ವಿಭಾಗದಲ್ಲಿ ಉಡುಪಿಯಲ್ಲಿನ ಮಣಿಪಾಲ್ ಕಾಲೇಜ್ ಆಫ್ ಡೆಂಟಲ್ ಕಾಲೇಜ್‌ಗೆ 2ನೇ ಸ್ಥಾನ, ಮಂಗಳೂರಿನಲ್ಲಿರುವ ಮಣಿಪಾಲ್ ಕಾಲೇಜ್ ಆಫ್ ಡೆಂಟಲ್ ಸೈನ್ಸ್ ಸಂಸ್ಥೆಗೆ 6ನೇ ಸ್ಥಾನ ಲಭ್ಯವಾಗಿದೆ. ಫಾರ್ಮಸಿ

MANIPAL
ACADEMY of HIGHER EDUCATION

(ಔಷಧ ವಿಜ್ಞಾನ) ವಿಭಾಗದಲ್ಲಿ ಉಡುಪಿ ಯಲ್ಲಿನ ಮಣಿಪಾಲ್ ಕಾಲೇಜ್ ಆಫ್ ಫಾರ್ಮಾಸ್ಯುಟಿಕಲ್ ಸೈನ್ಸ್ ಸಂಸ್ಥೆ 7ನೇ ರ‍್ಯಾಂಕಿಂಗ್ ಪಡೆದಿದೆ. ವೈದ್ಯಕೀಯ ವಿಭಾಗದಲ್ಲಿ ಮಣಿಪಾಲದಲ್ಲಿರುವ ಕಸ್ತೂರ್‌ಬಾ ವೈದ್ಯಕೀಯ ಕಾಲೇಜು 9ನೇ ಸ್ಥಾನ ಪಡೆದಿದೆ ಹಾಗೂ ಮಂಗಳೂರಿನಲ್ಲಿರುವ ಕಸ್ತೂರ್‌ಬಾ ಮೆಡಿಕಲ್ ಕಾಲೇಜ್ 21ನೇ ಸ್ಥಾನ ಪಡೆದಿದೆ. ಮ್ಯಾನೇಜ್‌ಮೆಂಟ್ ವಿಭಾಗದಲ್ಲಿ ಮಣಿಪಾಲದಲ್ಲಿರುವ ಟಿ.ಎ. ಪೈ ಮ್ಯಾನೇಜ್‌ಮೆಂಟ್ ಇನ್ಸ್ಟಿಟ್ಯೂಟ್ 27ನೇ ಸ್ಥಾನ ಗಳಿಸಿದ್ದು, ವಿಶ್ವವಿದ್ಯಾಲಯಗಳ ರ‍್ಯಾಂಕಿಂಗ್‌ನಲ್ಲಿ ಮಣಿಪಾಲ್ ಅಕಾಡೆಮಿ ಆಫ್ ಹೈಯರ್ ಎಜುಕೇಷನ್ (ಮಾಹೆ) 8ನೇ ಸ್ಥಾನ ಲಭಿಸಿದೆ. ಇನ್ನುಳಿದಂತೆ, ವಾಸ್ತುಶಿಲ್ಪ ವಿಭಾಗದಲ್ಲಿ ಮಣಿಪಾಲ ಅಕಾಡೆಮಿ ಆಫ್ ಹೈಯರ್ ಎಜುಕೇಷನ್ (ಉಡುಪಿ) ಸಂಸ್ಥೆಗೆ 12ನೇ ಸ್ಥಾನ ಹಾಗೂ ಎಂಜಿನಿಯರಿಂಗ್ ವಿಭಾಗದಲ್ಲಿ ಮಣಿಪಾಲ್ ಇನ್ಸ್ಟಿಟ್ಯೂಟ್ ಆಫ್ ಟೆಕ್ನಾಲಜಿಗೆ 45ನೇ ಸ್ಥಾನ ಸಿಕ್ಕಿದೆ.

### ಇತರ ಪ್ರಮುಖ ವಿದ್ಯಾಸಂಸ್ಥೆಗಳು

**ಎಂಜಿನಿಯರಿಂಗ್**

| ಸಂಸ್ಥೆ | ಸ್ಥಳ | ರ‍್ಯಾಂಕಿಂಗ್ |
|---|---|---|
| ನ್ಯಾಷನಲ್ ಇನ್ಸ್ಟಿಟ್ಯೂಟ್ ಆಫ್ ಟೆಕ್ನಾಲಜಿ | ಸುರತ್ಕಲ್ | 13 |
| ವಿಶ್ವೇಶ್ವರಯ್ಯ ಟೆಕ್ನಾಲಜಿಕಲ್ ವಿಶ್ವವಿದ್ಯಾಲಯ | ಬೆಳಗಾವಿ | 55 |
| ಎಂ.ಎಸ್. ರಾಮಯ್ಯ ಇನ್ಸ್ಟಿಟ್ಯೂಟ್ ಆಫ್ ಟೆಕ್ನಾಲಜಿ | ಬೆಂಗಳೂರು | 59 |
| ಇಂಟರ್‌ನ್ಯಾಷನಲ್ ಇನ್ಸ್ಟಿಟ್ಯೂಟ್ ಆಫ್ ಐಟಿ ಬೆಂಗಳೂರು | ಬೆಂಗಳೂರು | 62 |
| ಆರ್.ವಿ. ಕಾಲೇಜ್ ಆಫ್ ಎಂಜಿನಿಯರಿಂಗ್ | ಬೆಂಗಳೂರು | 70 |
| ಬಿಎಂಎಸ್ ಕಾಲೇಜ್ ಆಫ್ ಎಂಜಿನಿಯರಿಂಗ್ | ಬೆಂಗಳೂರು | 73 |
| ಸಿದ್ಧಗಂಗಾ ಇನ್ಸ್ಟಿಟ್ಯೂಟ್ ಆಫ್ ಟೆಕ್ನಾಲಜಿ | ತುಮಕೂರು | 91 |
| ಪಿಇಎಸ್ ಯುನಿವರ್ಸಿಟಿ | ಬೆಂಗಳೂರು | 93 |
| ದಯಾನಂದ ಸಾಗರ್ ಕಾಲೇಜ್ ಆಫ್ ಎಂಜಿನಿಯರಿಂಗ್ | ಬೆಂಗಳೂರು | 126 |
| ನಿಟ್ಟೆ ಮೀನಾಕ್ಷಿ ಇನ್ಸ್ಟಿಟ್ಯೂಟ್ ಆಫ್ ಟೆಕ್ನಾಲಜಿ | ಬೆಂಗಳೂರು | 128 |
| ಜೆಎಸ್‌ಎಸ್ ಸೈನ್ಸ್ ಆ್ಯಂಡ್ ಟೆಕ್ನಾಲಜಿ ವಿವಿ | ಮೈಸೂರು | 132 |
| ಎನ್.ಎಂ.ಎ.ಎಂ. ಇನ್ಸ್ಟಿಟ್ಯೂಟ್ ಆಫ್ ಟೆಕ್ನಾಲಜಿ ನಿಟ್ಟೆ | ಉಡುಪಿ | 133 |
| ಕೆಎಲ್‌ಇ ಟೆಕ್ನಾಲಜಿಕಲ್ ವಿಶ್ವವಿದ್ಯಾಲಯ | ಧಾರವಾಡ | 136 |
| ಪಿಇಎಸ್ ಕಾಲೇಜ್ ಆಫ್ ಎಂಜಿನಿಯರಿಂಗ್ | ಮಂಡ್ಯ | 147 |
| ಅಲಯನ್ಸ್ ಯೂನಿವರ್ಸಿಟಿ | ಬೆಂಗಳೂರು | 159 |
| ಬಿಎಂಎಸ್ ಇನ್ಸ್ಟಿಟ್ಯೂಟ್ ಆಫ್ ಟೆಕ್ನಾಲಜಿ | ಬೆಂಗಳೂರು | 169 |
| ನ್ಯಾಷನಲ್ ಇನ್ಸ್ಟಿಟ್ಯೂಟ್ ಆಫ್ ಎಂಜಿನಿಯರಿಂಗ್ | ಮೈಸೂರು | 175 |

**ಮ್ಯಾನೇಜ್‌ಮೆಂಟ್**

| | | |
|---|---|---|
| ಇಂಡಿಯನ್ ಇನ್ಸ್ಟಿಟ್ಯೂಟ್ ಆಫ್ ಮ್ಯಾನೇಜ್‌ಮೆಂಟ್ | ಬೆಂಗಳೂರು | 2 |

**ಔಷಧ ವಿಜ್ಞಾನ**

| | | |
|---|---|---|
| ಜೆಎಸ್‌ಎಸ್ ಕಾಲೇಜ್ ಆಫ್ ಫಾರ್ಮಸಿ | ಮೈಸೂರು | 10 |
| ಕೆಎಲ್‌ಇ ಕಾಲೇಜ್ ಆಫ್ ಫಾರ್ಮಸಿ | ಬೆಳಗಾವಿ | 37 |
| ಎಂ.ಎಸ್. ರಾಮಯ್ಯ ಯುನಿವರ್ಸಿಟಿ ಆಫ್ ಅಪ್ಲೈಡ್ ಸೈನ್ಸಸ್ | ಬೆಂಗಳೂರು | 52 |

**ಕಾಲೇಜು**

| | | |
|---|---|---|
| ಸೇಂಟ್ ಜೋಸೆಫ್ ಕಾಲೇಜ್ ಆಫ್ ಕಾಮರ್ಸ್ | ಬೆಂಗಳೂರು | 72 |

**ವೈದ್ಯಕೀಯ**

| | | |
|---|---|---|
| ನಿಮ್ಹಾನ್ಸ್ | ಬೆಂಗಳೂರು | 4 |
| ಜೆಎಸ್‌ಎಸ್ ಮೆಡಿಕಲ್ ಕಾಲೇಜ್ | ಮೈಸೂರು | 20 |
| ಎಂ.ಎಸ್. ರಾಮಯ್ಯ ಕಾಲೇಜ್ | ಬೆಂಗಳೂರು | 30 |
| ಕೆ.ಎಸ್. ಹೆಗ್ಡೆ ಮೆಡಿಕಲ್ ಕಾಲೇಜ್ | ಮಂಗಳೂರು | 36 |

**ಕಾನೂನು**

| | | |
|---|---|---|
| ನ್ಯಾಷನಲ್ ಲಾ ಸ್ಕೂಲ್ ಆಫ್ ಇಂಡಿಯಾ ಯುನಿವರ್ಸಿಟಿ | ಬೆಂಗಳೂರು | 1 |
| ಕ್ರೈಸ್ಟ್ ಯೂನಿವರ್ಸಿಟಿ | ಬೆಂಗಳೂರು | 20 |

**ವಾಸ್ತುಶಿಲ್ಪ**

| | | |
|---|---|---|
| ಬಿಎಂಎಸ್ ಕಾಲೇಜ್ ಆಫ್ ಆರ್ಕಿಟೆಕ್ಚರ್ | ಬೆಂಗಳೂರು | 14 |

**ದಂತವೈದ್ಯ**

| | | |
|---|---|---|
| ಎಬಿಎಸ್‌ಎಂ ಇನ್ಸ್ಟಿಟ್ಯೂಟ್ ಆಫ್ ಡೆಂಟಲ್ ಸೈನ್ಸಸ್ | ಮಂಗಳೂರು | 5 |
| ಜೆಎಸ್‌ಎಸ್ ಡೆಂಟಲ್ ಕಾಲೇಜ್ ಮತ್ತು ಆಸ್ಪತ್ರೆ | ಮೈಸೂರು | 10 |
| ಎಂ.ಎಸ್. ರಾಮಯ್ಯ ಯೂನಿವರ್ಸಿಟಿ ಆಫ್ ಅಪ್ಲೈಡ್ ಸೈನ್ಸಸ್ | ಬೆಂಗಳೂರು | 11 |
| ಬಾಪೂಜಿ ಡೆಂಟಲ್ ಕಾಲೇಜ್ | ದಾವಣಗೆರೆ | 16 |
| ಕೆಎಲ್‌ಇ ವಿಶ್ವನಾಥ್ ಕಟ್ಟಿ | ಬೆಳಗಾವಿ | 24 |
| ಶ್ರೀ ಧರ್ಮಸ್ಥಳ ಮಂಜುನಾಥೇಶ್ವರ ಕಾಲೇಜ್ | ಧಾರವಾಡ | 26 |

**ವಿಶ್ವವಿದ್ಯಾಲಯ**

| | | |
|---|---|---|
| ಇಂಡಿಯನ್ ಇನ್ಸ್ಟಿಟ್ಯೂಟ್ ಆಫ್ ಸೈನ್ಸ್ | ಬೆಂಗಳೂರು | 1 |
| ಮೈಸೂರು ವಿಶ್ವವಿದ್ಯಾಲಯ | ಮೈಸೂರು | 27 |
| ಜೆಎಸ್‌ಎಸ್ ಅಕಾಡೆಮಿ | ಮೈಸೂರು | 33 |
| ಬೆಂಗಳೂರು ವಿಶ್ವವಿದ್ಯಾಲಯ | ಬೆಂಗಳೂರು | 68 |
| ಕೆಎಲ್‌ಇ ಅಕಾಡೆಮಿ ಆಫ್ ಹೈಯರ್ ಎಜುಕೇಷನ್ | ಬೆಳಗಾವಿ | 70 |
| ಕುವೆಂಪು ವಿಶ್ವವಿದ್ಯಾಲಯ | ಶಿವಮೊಗ್ಗ | 73 |
| ನಿಟ್ಟೆ | ಮಂಗಳೂರು | 74 |
| ವಿಶ್ವೇಶ್ವರಯ್ಯ ತಾಂತ್ರಿಕ ವಿಶ್ವವಿದ್ಯಾಲಯ | ಬೆಳಗಾವಿ | 80 |
| ಜೈನ್ ವಿಶ್ವವಿದ್ಯಾಲಯ | ಬೆಂಗಳೂರು | 85 |

ಕೋಲಾರ ಪತ್ರಿಕೆ



ದೇವರಾಜ ಅರಸು ವೈದ್ಯಕೀಯ ವಿವಿಯಲ್ಲಿ ಹತ್ತನೇ ವರ್ಚುಯಲ್ ಘಟಿಕೋತ್ಸವ

# ವೈದ್ಯಕೀಯ ವೃತ್ತಿ ಚಲನಶೀಲತೆಯ ವೇಗಕ್ಕೆ ವಿದ್ಯಾರ್ಥಿಗಳನ್ನು ರೂಪಿಸಿ: ಕೆ.ಆರ್.ಎಸ್.ಮೂರ್ತಿ





ಕೋಲಾರ ಜೂ ೧೨

ವೈದ್ಯಕೀಯ ವಿದ್ಯಾರ್ಥಿಗಳನ್ನು ವೈದ್ಯಕೀಯ ವೃತ್ತಿಯಲ್ಲಿನ ಚಲನಶೀಲತೆಯ ವೇಗಕ್ಕೆ ಹೊಂದಿಕೊಳ್ಳುವಂತೆ ರೂಪಿಸುವ ಅಗತ್ಯವಿದೆಯೆಂದು ಮುಂಬೈನ ಎನ್‌ಎಸ್‌ಇ ಅಕಾಡೆಮಿ ಮತ್ತು ಬಟರ್‌ಫ್ಲೈ ಇನ್ನೋವೇಶನ್ಸ್ ಲಿ.,ನ ನಿರ್ದೇಶಕ ಡಾ॥ ಕೆ.ಆರ್.ಎಸ್. ಮೂರ್ತಿಯವರು ಕರೆಯಿತ್ತಿದ್ದಾರೆ.

ಅವರು ನಗರದ ಹೊರವಲಯದ ಟಮಕದ ಶ್ರೀ ದೇವರಾಜ್ ಅರಸ್ ಉನ್ನತ ಶಿಕ್ಷಣ ಹಾಗೂ ಸಂಶೋಧನಾ ಸಂಸ್ಥೆಯ ಹತ್ತನೇ ವರ್ಚುವಲ್ ಘಟಿಕೋತ್ಸವದ ಪ್ರಧಾನ ಭಾಷಣವನ್ನು ಮಾಡುತ್ತಿದ್ದರು.

ದೇವರಾಜ್ ಅರಸ್ ತಮ್ಮ ವಿಶಾಲ ಅನುಭವದ ಹಿನ್ನೆಲೆಯಲ್ಲಿ ಕಲಿಕೆಯ ಪ್ರಾಮುಖ್ಯತೆಯನ್ನು ಎಳೆಎಳೆಯಾಗಿ ವಿವರಿಸಿದ ಮೂರ್ತಿಯವರು ಸಾರ್ವಜನಿಕರ ಸೇವೆಗಾಗಿ ತಮ್ಮ ಬದುಕನ್ನು ಮೀಸಲಿರುವ ವೈದ್ಯರು ಸಹಾನುಭೂತಿ, ನಮ್ರತೆ ಮತ್ತು ಸೇವೆ ಸಲ್ಲಿಸುವ ಮನೋಭಾವಗಳ ಆಧಾರದ ಮೇಲೆ ತಮ್ಮ ವೃತ್ತಿಯನ್ನು ನಿರ್ವಹಿಸಬೇಕೆಂದು ಕಿವಿಮಾತು ಹೇಳಿದರು.

ವೈದ್ಯಕೀಯ ವೃತ್ತಿಯ ಮೇಲೆ ಕೇವಲ ಆಕರ್ಷಣೆ ಪಡೆದು ಶುರು ಮಾಡುವುದ ಬದಲು ರೋಗಿಗಳ ನಂಬಿಕೆಯನ್ನು ಗಳಿಸುವ ಮತ್ತು ಆ ಸಂಬಿಕೆಗೆ ಧಕ್ಕೆಯುಂಟು ಮಾಡುವ ಯಾವುದೇ ಆಮಿಷವನ್ನು ವಿರೋಧಿಸಲು ಅವರು ಸಲಹೆ ನೀಡಿದರು.

ಭಾರತೀಯ ವೈದ್ಯಕೀಯ ಪದವೀಧರರಯ ಭಾರತೀಯ ವೈದ್ಯಕೀಯ ಪಿತಾಮಹ ಚರಕ ಮತ್ತು ಸುಶ್ರುತರು ಹಾಕಿಕೊಟ್ಟಿರುವ ಆದರ್ಶ ಪರಂಪರೆಯನ್ನು ಅನುಸರಿಸಲು ಕೋರಿದರು.

ದೇವರಾಜ್ ಅರಸ್ ಉನ್ನತ ಶಿಕ್ಷಣ ಹಾಗೂ ಸಂಶೋಧನಾ ಸಂಸ್ಥೆಯ ಕುಲಾಧಿಪತಿ ಡಾ॥ ಎಸ್. ಕುಮಾರ್ ಅವರು ಅಧ್ಯಕ್ಷತೆ ವಹಿಸಿದ್ದು ಕುಲಪತಿ ಡಾ॥ ಜಿ. ಪ್ರದೀಪ್‌ಕುಮಾರ್ ಅವರು ಘಟಿಕೋತ್ಸವ ನೆರವೇರಿಸಿ ವಿಶ್ವವಿದ್ಯಾಲಯದ ವರದಿಯನ್ನು ವಾಚಿಸಿದರು.

ದೇವರಾಜ ಅರಸ್ ಶಿಕ್ಷಣ ಟ್ರಸ್ಟ್‌ನ ಉಪಾಧ್ಯಕ್ಷ ರಾಜೇಶ್ ಎನ್.ಜಗದಾಳೆ, ಕಾರ್ಯದರ್ಶಿ ಜಿ.ಎಚ್. ನಾಗರಾಜ, ಹಾಕಾಸು ನಿರ್ದೇಶಕ ವಿ. ರಾಜೇಂದ್ರ ಅವರು ಉಪಸ್ಥಿತರಿದ್ದರು.

ಹೆಚ್ಚು ಅಂಕ ಗಳಿಸಿದ ೫ ಮಂದಿ ಸ್ನಾತಕೋತ್ತರ ಪದವಿ ಮತ್ತು ಡಿಪ್ಲೋಮಾ, ತಲಾ ಒಬ್ಬ ಎಂ.ಬಿ.ಬಿ.ಎಸ್ ವಿದ್ಯಾರ್ಥಿ, ಎಂಎಸ್ಸಿ ಮತ್ತು ಬಿಎಸ್ಸಿ ವಿದ್ಯಾರ್ಥಿಗಳಿಗೆ ಚಿನ್ನದ ಪದಕಗಳನ್ನು ನೀಡಲಾಯಿತು.

ವಿಶ್ವವಿದ್ಯಾಲಯದ ಒಟ್ಟು ೨೪೪ ವಿದ್ಯಾರ್ಥಿಗಳಿಗೆ ವಿವಿಧ ಕೋರ್ಸ್‌ಗಳಲ್ಲಿ ಪದವಿಗಳನ್ನು ಪ್ರದಾನ ಮಾಡಲಾಯಿತು:

ಪಿಎಚ್‌ಡಿ-೦೨(ಶರೀರಶಾಸ್ತ್ರ ಮತ್ತು ಬಯೋಕೆಮಿಸ್ಟ್ರಿ), ಫೆಲೋಶಿಪ್(ಹೆಡ್ ಅಂಡ್ ನೆಕ್ ಸರ್ಜಿಕಲ್ ಆಂಕಾಲಜಿ)-೦೧, ಸ್ನಾತಕೋತ್ತರ ಪದವಿ-೫೨, ಸ್ನಾತಕೋತ್ತರ ಡಿಪ್ಲೋಮಾ-೧೭, ಎಂ.ಬಿ.ಬಿ.ಎಸ್.ಪದವಿ-೧೧೯, ಪಿಎಚ್‌ಡಿ-೦೧(ಶುಶ್ರೂಷೆ), ಎಂ.ಎಸ್ಸಿ. ಎಂ.ಎಲ್.ಟಿ-೦೩ ಹಾಗೂ ಬಿ.ಎಸ್ಸಿ ಅಲೈಡ್ ಹೆಲ್ತ್ ಸೈನ್ಸ್-೧೧೯ ವಿದ್ಯಾರ್ಥಿಗಳು ಇವರಲ್ಲಿ ಸೇರಿದ್ದರು.

ಕೊರೋನಾ ಬಿಕ್ಕಟ್ಟಿನ ಹಿನ್ನೆಲೆಯಲ್ಲಿ ಸಾಮಾಜಿಕ ಅಂತರವನ್ನು ಪಾಲಿಸಿ ಸರಳವಾಗಿ ಘಟಿಕೋತ್ಸವ ಕಾರ್ಯಕ್ರಮ ನಡೆಯಿತು.

## ಷೇರುಪೇಟೆ ಚೇತರಿಕೆ

ನವದೆಹಲಿ ಜೂ ೧೨

ಮುಂಬೈ ಷೇರುಪೇಟೆಯಲ್ಲಿ ಶುಕ್ರವಾರದ ವಹಿವಾಟಿನಲ್ಲಿ ೧೭೪ ಅಂಕಗಳ ಏರಿಕೆಯಿಂದ ಸಂವೇದಿ ಸೂಚ್ಯಂಕ ೫೨,೪೭೪ ತಲುಪಿತು. ಇದೇ ವೇಳೆ ನಿಫ್ಟಿ ಸೂಚ್ಯಂಕ ೬೧ ಅಂಕ ಜಿಗಿದು ೧೫೭೯೯ರಲ್ಲಿದ್ದಿತು.

ULLRC
SDUAHER

ULLRC
SDUAHER